# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 746
ಸದಸ್ಯರ ಹೆಸರು: ಡಾ.ವೈ.ಎ. ನಾರಾಯಣ ಸ್ವಾಮಿ
ಉತ್ತರಿಸುವ ದಿನಾಂಕ: 10-03-2020
ಉತ್ತರಿಸುವವರು: ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

| | ಪ್ರಶ್ನೆಗಳು | ಉತ್ತರ |
|---|---|---|
| ಅ | ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಗೂಡಿಗೆ ನೀಡುತ್ತಿರುವ ಪ್ರೋತ್ಸಾಹಧನ ಎಷ್ಟು; ವಾರ್ಷಿಕವಾಗಿ ಈ ಯೋಜನೆಗಾಗಿ ಮೀಸಲಿಟ್ಟಿರುವ ಅನುದಾನದ ಮೊತ್ತವೆಷ್ಟು; | ರಾಜ್ಯದಲ್ಲಿ ಶುದ್ಧ ಮೈಸೂರು ತಳಿ ಮತ್ತು ದ್ವಿತಳಿ ಬಿತ್ತನೆ ಗೂಡು ಬೆಳೆಯುವ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ಕೆಳಕಂಡಂತೆ ವಿತರಿಸಲಾಗುತ್ತಿದೆ.<br>1. ಶುದ್ಧ ಮೈಸೂರು ತಳಿ ಮತ್ತು ದ್ವಿತಳಿ ಬಿತ್ತನೆ ಗೂಡಿಗೆ ಬೇಡಿಕೆ ಇಲ್ಲದೇ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಾಗ ಪ್ರತಿ ಕೆ.ಜಿ. ಬಿತ್ತನೆ ಗೂಡಿಗೆ ರೂ.175ರಂತೆ ಪ್ರೋತ್ಸಾಹಧನ(ಬೋನಸ್) ನೀಡಲಾಗುತ್ತಿದೆ.<br>2. ಉತ್ಪಾದನೆ ಹಾಗೂ ಗುಣಮಟ್ಟದ ಆಧಾರದ ಮೇಲೆ ಪ್ರತಿ ಕೆ.ಜಿ. ಬಿತ್ತನೆ ಗೂಡಿಗೆ ರೂ.70 ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>ಈ ಯೋಜನೆಗಾಗಿ 2019-20ನೇ ಸಾಲಿನಲ್ಲಿ ರೂ.1103.549ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ಜನವರಿ2020ರ ಅಂತ್ಯಕ್ಕೆ ರೂ.1093.476ಲಕ್ಷಗಳ ಪ್ರೋತ್ಸಾಹಧನ/ಬೋನಸ್ ಮೊತ್ತವನ್ನು ಬಿತ್ತನೆ ಬೆಳೆಗಾರರಿಗೆ ವಿತರಿಸಲಾಗಿದೆ. ಆಗಿಂದಾಗ್ಗೆ ಬಿತ್ತನೆ ಬೆಳೆಗಾರರ ಬೇಡಿಕೆಯನುಸಾರ ವಂಟನೆ ನಿಗದಿಪಡಿಸಲಾಗುತ್ತದೆ. |
| ಆ | ಈ ಹಣವನ್ನು ರೈತರಿಗೆ ಪಾವತಿಸುವ ಪದ್ಧತಿ ಯಾವುದು; | ಬಿತ್ತನೆ ವಲಯದ ರೇಷ್ಮೆ ಗೂಡು ಮಾರುಕಟ್ಟೆಗಳಿಂದ ಪ್ರೋತ್ಸಾಹಧನ/ಬೋನಸ್ ಮೊತ್ತವನ್ನು ಇಸಿಎಸ್ ಮುಖಾಂತರ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿಸಲಾಗುತ್ತಿದೆ. |
| ಇ | ಇದುವರೆಗೆ ಮೇಲ್ಕಂಡ ಫಲಾನುಭವಿಗಳಿಗೆ ಸರ್ಕಾರದಿಂದ ಬರಬೇಕಾಗಿರುವ ಬಾಕಿ ಹಣ ಎಷ್ಟು? | ಬಾಕಿ ಇರುವುದಿಲ್ಲ. |

ರೇಷ್ಮೆ 31 ರೇಕ್ರುವಿ 2020

(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು